ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE-ADMI0EST(10)/31/2022-JD-DEPT

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001ದಿ: 20.06.2022

72

**ಸುತ್ತೋಲೆ**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರುಗಳು ಸಿ.ಎ.ಎಸ್ (ವೃತ್ತಿ ಪದೋನ್ನತಿ)ಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿನ ಉಪನ್ಯಾಸಕ ವರ್ಗದವರಿಗೆ AICTE 6 ನೇ ವೇತನ ಶ್ರೇಣಿ ಹಾಗೂ 2012ರ ಎಐಸಿಟಿಇ ಅಧಿನಿಯಮಗಳನ್ವಯ ವೃತ್ತಿ ಪದೋನ್ನತಿಗೆ (ಸಿ.ಎ.ಎಸ್) ಅರ್ಹರಿರುವವರಿಗೆ ಈ ಕಛೇರಿ ಸುತ್ತೋಲೆ ಸಂಖ್ಯೆ: DTE/ADMI0/EST(10) 2022, ದಿ; 19.05.2022 ಮತ್ತು 31.05.2022 ಗಳಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿತ್ತು.

**ಈ ಸಂಬಂಧ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳಿಗೆ ಈ ಕೆಳಗೆ ತಿಳಿಸಿರುವಂತೆ ಕ್ರಮವಹಿಸಲು ಸೂಚಿಸಲಾಗಿದೆ.**

01. ದಿನಾಂಕ: 07.11.2015ರ ಮುಂಚೆ ವೃತ್ತಿ ಪದೋನ್ನತಿಗೆ (ಸಿ.ಎ.ಎಸ್) ಅರ್ಹರಿರುವ ಉಪನ್ಯಾಸಕರುಗಳ ಪ್ರಸ್ತಾವನೆಗಳನ್ನು ಮಾತ್ರ ಸ್ವೀಕರಿಸುವುದು.
02. ದಿನಾಂಕ 07.11.2015ರ ನಂತರ ವೃತ್ತಿ ಪದೋನ್ನತಿಗೆ (ಸಿ.ಎ.ಎಸ್) ಅರ್ಹರಿರುವ ಉಪನ್ಯಾಸಕರುಗಳ ಪ್ರಸ್ತಾವನೆಗಳನ್ನು ಆಯುಕ್ತಾಲಯದ ಮುಂದಿನ ನಿರ್ದೇಶನದವರೆಗೆ ಸ್ವೀಕರಿಸದಿರಲು ಮತ್ತು ಅಂತಹ ಉಪನ್ಯಾಸಕರುಗಳಿಗೆ ಎಲ್ಲಾ ಮಾಹಿತಿಯನ್ನು ಕ್ರೋಢಿಕರಿಸಿಟ್ಟುಕೊಳ್ಳಲು ಸೂಚಿಸಿದೆ.
03. ಆಯುಕ್ತಾಲಯದ ಮುಂದಿನ ನಿರ್ದೇಶನ ಬರುವವರೆಗೆ ಉಪನ್ಯಾಸಕರುಗಳ ಯಾವುದೇ ಪ್ರಸ್ತಾವನೆಗಳನ್ನು ಆಯುಕ್ತಾಲಕ್ಕೆ ರವಾನಿಸಬಾರದೆಂದು ಈ ಮೂಲಕ ಸೂಚಿಸಿದೆ..

**ವಿಶೇಷ ಸೂಚನೆ:**
ಸಂಸ್ಥೆ ಹಂತದಲ್ಲಿ ವೃತ್ತಿ ಪದೋನ್ನತಿಗೆ (ಸಿ.ಎ.ಎಸ್) ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅತಿ ಶೀಘ್ರದಲ್ಲಿ **"ವಿಡಿಯೋ ಕಾನ್ಫರೆನ್ಸ್"** ಮುಖಾಂತರ ಮಾಹಿತಿಯನ್ನು ನೀಡಲಾಗುವುದು.

ಜಂ. ನಿರ್ದೇಶಕರು 22/06/2022
ತಾಂತ್ರಿಕ ಶಿಕ್ಷಣ ಇಲಾಖೆ

ಪ್ರತಿಗಳು:

1. **ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್, ಪ್ರಾಂಶುಪಾಲರುಗಳ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ.**
2. ಆಯುಕ್ತರ ಆಪ್ತ ಶಾಖೆ. (ಮಾಹಿತಿಗಾಗಿ)
3. ನಿರ್ದೇಶಕರ ಆಪ್ತ ಶಾಖೆ. (ಮಾಹಿತಿಗಾಗಿ)
4. ಜಂಟಿ ನಿರ್ದೇಶಕರು(ಆಡಳಿತ) ಆಪ್ತ ಶಾಖೆ. (ಮಾಹಿತಿಗಾಗಿ)
5. ಇ-ಆಡಳಿತ ವಿಭಾಗ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
6. ಕಛೇರಿ ಪ್ರತಿ.